ಆದರೆ ಮೇಷ್ಟ್ರು ಕೊಟ್ಟ ಡೈರಿಯ ವಿವರಗಳಲ್ಲಿ ವಿಚಿತ್ರವಾದ ತಿರುವುಗಳಿದ್ದವು: ಒಂದು ಸಂಜೆ ಹೋಟೆಲೊಂದರಲ್ಲಿ ಪೇಪರ್ ಓದುತ್ತಾ ಕಾಫಿ ಕುಡಿಯುತ್ತಿದ್ದ ಮೇಷ್ಟರನ್ನು ಅವರ ಊರ ಕಡೆಯ ಪರಿಚಯ ಹೇಳಿಕೊಂಡು ಯಾರೋ ಒಬ್ಬರು ಭೇಟಿ ಮಾಡುತ್ತಾರೆ. ಹೀಗೇ ಪರಿಚಯ ಬೆಳೆದು ಆ ವ್ಯಕ್ತಿಗೆ ಮೇಷ್ಟ್ರು ತಮ್ಮ ಮಿತ್ರರೊಬ್ಬರ ಮನೆಯನ್ನು ಬಾಡಿಗೆ ಕೊಡಿಸುತ್ತಾರೆ. ಬಾಡಿಗೆಗೆ ಮನೆ ಹಿಡಿದ ವ್ಯಕ್ತಿ ಕೆಲವು ತಿಂಗಳ ನಂತರ ನಾಪತ್ತೆಯಾಗುತ್ತಾನೆ. ಓನರ್ ಕೊಟ್ಟ ದೂರಿನ ಮೇರೆಗೆ ಮನೆಯ ಬೀಗ ಒಡೆದು ನೋಡಿದರೆ ಆ ಮನೆಯಲ್ಲಿ ಬಂದೂಕುಗಳು ಸಿಗುತ್ತವೆ. ಆ ವ್ಯಕ್ತಿಗೆ ಮನೆ ಕೊಡಿಸಿದ್ದ ಮೇಷ್ಟ್ರು ಅರೆಸ್ಟಾಗುತ್ತಾರೆ.

ಇದನ್ನೆಲ್ಲ ನಾನು ಬರೆದಂತೆ 'ಸಂಕ್ರಾಂತಿ' ಪತ್ರಿಕೆ ವಾರ ವಾರ ಧಾರಾವಾಹಿಯಾಗಿ ನನ್ನ ಹೆಸರಿಲ್ಲದೆಯೇ ಪ್ರಕಟಿಸುತ್ತಿತ್ತು. ಕೋರ್ಟಿನಲ್ಲಿ ಮೇಷ್ಟರ ಪರವಾಗಿ ಕ್ರಿಮಿನಲ್ ಲಾಯರ್ ಹನುಮಂತರಾಯರ ವಾದ ನಡೆಯುತ್ತಿದ್ದ ಆ ಕಾಲದಲ್ಲಿ ಈ ಅನುಭವಕಥನವೂ ಒಂದು ಥರದ ವಾದದ ಧಾಟಿಯಲ್ಲೇ ಬೆಳೆಯುತ್ತಿತ್ತು. ಈ ಕಥನವನ್ನು ಕನ್ನಡದಲ್ಲಿ ಬರೆದವರ ಹೆಸರನ್ನು ಪತ್ರಿಕೆಯವರು ಪ್ರಕಟಿಸದಿದ್ದರೂ, ಒಂದು ಮಧ್ಯಾಹ್ನ ಇಂಟೆಲಿಜೆನ್ಸ್ ಪೋಲೀಸಿನವರು ಬಂದು, 'ನಿಮ್ಮ ಕಾಲೇಜಿನಲ್ಲಿ ಮೇಷ್ಟರಾಗಿರುವ ಜೋಸೆಫ್‌ಗೆ ಈ ಧಾರಾವಾಹಿ ನಿಲ್ಲಿಸೋಕೆ ಹೇಳಿ' ಎಂದು ಆಗ ಕೆಲಸ ಮಾಡುತ್ತಿದ್ದ ಕಾಲೇಜಿನ ಮ್ಯಾನೇಜ್‌ಮೆಂಟಿನವರಿಗೆ ಧಮಕಿ ಹಾಕಿ ಹೋಗಿದ್ದರು. ಈ ಬೆದರಿಕೆಗೆಲ್ಲಾ ಬಗ್ಗುವುದಿಲ್ಲವೆಂದೂ, ಯಾವ ಕಾರಣಕ್ಕೂ ಬರವಣಿಗೆ ನಿಲ್ಲಿಸುವುದಿಲ್ಲವೆಂದೂ ನಾನು ಹೇಳಿದ್ದೂ ಆಯಿತು. ಅದೇ ಆಗ ನನ್ನ ಬಹುಮಾನಿತ ಕತೆ ಒಂಚೂರು ಫೇಮಸ್ ಆಗಿದ್ದರಿಂದ, ಈ ಥರದ ಗಲಾಟೆ ಆದರೆ ನಾನು ಇನ್ನಷ್ಟು ಫೇಮಸ್

